**Kannada Prabha**

Date: Sept 2, 2015 | Page No. 03 (City)

Edition: Bengaluru | Language: Kannada

# ಎಸ್‌ಡಿಎಂನಲ್ಲಿ ನಾಲ್ಕನೇ ಮ್ಯಾನೇಜ್‌ಮೆಂಟ್ ಸಮ್ಮೇಳನ

ಬೆಂಗಳೂರು: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆ (ಎಸ್ ಡಿಎಂಐಎಂಡಿ) ಆಶ್ರಯದಲ್ಲಿ 'ಗ್ಲೋಬಲ್ ರಿಕವರಿ: ಇಂಡಿಯಾ ಸ್ಟೋರಿ' ವಿಷಯ ಕುರಿತು 4ನೇ ಅಂತಾರಾಷ್ಟ್ರೀಯ ಸಮ್ಮೇಳನ ನಡೆಯಿತು. ಹೆಕ್ಸಾಗನ್ ಹೆಲ್ತ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಪ್ರಧಾನ ಸಲಹೆಗಾರ ಟಿ. ಶ್ರೀಕಾಂತ್ ಭಾಗವತ್, ಮುಂಬರುವ ವರ್ಷಗಳಲ್ಲಿ ಭಾರತ ಮತ್ತು ಚೀನಾ ಜಾಗತಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಲಿವೆ ಎಂದರು. ಆಸ್ಟ್ರೇಲಿಯದ ಡಾ. ಕುಲದೀಪ್‌ಕುಮಾರ್, ಫ್ರಾನ್ಸ್‌ನ ಡಾ. ಅಶ್ವಾ ಅರವಿಂದ್, ದುಬೈನ ಡಾ. ಇಳಾಂಗೊ ರಂಗಸ್ವಾಮಿ, ಇರಾನಿನ ಡಾ. ಹುಯೀದ್ ಸರೇಮಿ ಮತ್ತು ಭಾರತದ ಡಾ. ಎಸ್. ವಸುಮತಿ ಹರಿಹರನ್ ವಿವಿಧ ಗೋಷ್ಠಿಗಳನ್ನು ನಡೆಸಿಕೊಟ್ಟರು. ಡಾ. ಎನ್.ಆರ್. ಪರಶುರಾಮನ್, ಡಾ. ಉಲ್ಲಾಸ್ ರಾವ್ ಮಾತನಾಡಿದರು.